# ನಿಮ್ಮೊಡನೆ

## ಮೆಡಿಕಲ್ ಟೂರಿಸಂ ಜನಪ್ರಿಯತೆ

> 2009ರಲ್ಲಿ ಭಾರತದ ಮೆಡಿಕಲ್ ಟೂರಿಸಂ ಕ್ಷೇತ್ರ 3 ಲಕ್ಷ ವಿದೇಶೀಯರನ್ನು ಆಕರ್ಷಿಸಿದ್ದರೆ, 2011ರಲ್ಲಿ 8.5 ಲಕ್ಷ ವಿದೇಶೀಯರು ಚಿಕಿತ್ಸೆಗಾಗಿ ಆಗಮಿಸಿದ್ದರು. 2015ರ ಕೊನೆಗೆ ಈ ಸಂಖ್ಯೆ 32 ಲಕ್ಷವನ್ನು ದಾಟುವ ನಿರೀಕ್ಷೆ ಇದೆ. ಆದರೆ ಇತ್ತೀಚೆಗೆ ನಮ್ಮ 'ಕಳಪೆ ನಾಗರಿಕ ಪ್ರಜ್ಞೆ'ಯೇ ಈ ಉದ್ಯಮಕ್ಕೆ ಕುತ್ತಾಗುತ್ತಿದೆ.

ದಕ್ಷಿಣ ಭಾರತದ ರಾಜ್ಯಗಳು ಕಳೆದ 10 ವರ್ಷಗಳಿಂದ ಮೆಡಿಕಲ್ ಟೂರಿಸಂ ನಲ್ಲಿ ಮುಂಚೂಣಿಯಲ್ಲಿವೆ. ಅತ್ಯುತ್ತಮ ವೈದ್ಯಕೀಯ ಸೇವೆ ಲಭಿಸುತ್ತಿರುವ ತಮಿಳುನಾಡು. ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಿಗೆ ದೇಶ– ವಿದೇಶಗಳಿಂದ ರೋಗಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಜತೆಗೆ ಭಾರತದ ರಾಜಸ್ತಾನ ಮತ್ತು ದೆಹಲಿಗಳೂ ವೈದ್ಯಕೀಯ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುತ್ತಿವೆ. ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು ಮತ್ತು ಮಣಿಪಾಲಗಳು ಮೆಡಿಕಲ್ ಟೂರಿಸಂನ ಮುಂಚೂಣಿಯಲ್ಲಿದ್ದರೆ, ಚೆನ್ನೈ, ಹೈದರಾಬಾದ್, ಮುಂಬೈಗಳೂ ನಮಗಿಂತ ಹೆಚ್ಚು ರೋಗಿಗಳನ್ನು ಆಕರ್ಷಿಸುತ್ತಿವೆ. ವಿವಿಧ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಂಡು ಒಂದು ತಿಂಗಳ ವಿರಾಮ ಪಡೆಯಲು ಇಲ್ಲಿಗೆ ಆಗಮಿಸುವ ವಿದೇಶೀಯರಿಗೆ ಮತ್ತು ಅವರ ಸಂಬಂಧಿಕರಿಗೆ ಇಲ್ಲಿನ ವೈವಿಧ್ಯಮಯ ಐತಿಹಾಸಿಕ ಮತ್ತು ಧಾರ್ಮಿಕ ಪ್ರವಾಸಿ ಸ್ಥಳಗಳ ದರ್ಶನದ ವ್ಯವಸ್ಥೆ ಮಾಡಿಸುವುದು ಈ ಮೆಡಿಕಲ್ ಟೂರಿಸಂನ ವಿಶೇಷ. ವಸತಿ, ಪ್ರವಾಸ ಮತ್ತು ಚಿಕಿತ್ಸೆ– ಈ ಮೂರನ್ನೂ ಒಂದು ಪ್ಯಾಕೇಜ್ ರೂಪದಲ್ಲಿ ನೀಡಿದರೆ, ರೋಗಿಗಳಿಗೂ, ಅವರ ಜತೆಗೆ ಬಂದವರಿಗೂ ಒಂದೇ ಖರ್ಚಿನಲ್ಲಿ ಆರೋಗ್ಯ ಮತ್ತು ಪ್ರವಾಸದ ಸಂತೋಷ ಎರಡನ್ನೂ ಪಡೆದಂತಾಗುತ್ತದೆ.

ವಿದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ವೈದ್ಯಕೀಯ ಚಿಕಿತ್ಸೆಯ ವೆಚ್ಚವೂ ಕಡಿಮೆ. ಉದಾಹರಣೆಗೆ, ಮಂಡಿ ಮರುಜೋಡಣೆ ಶಸ್ತ್ರಚಿಕಿತ್ಸೆಗೆ ಅಮೆರಿಕದಲ್ಲಿ ಸುಮಾರು 35 ಸಾವಿರ ಡಾಲರ್ ವೆಚ್ಚವಾದರೆ, ಭಾರತದಲ್ಲಿ ಅದನ್ನೇ 6600 ಡಾಲರ್ ವೆಚ್ಚದಲ್ಲಿ ಮಾಡಲಾಗುತ್ತದೆ. ಹೃದಯಕವಾಟ ಬದಲಿ ಶಸ್ತ್ರಚಿಕಿತ್ಸೆಗೆ ನಮ್ಮಲ್ಲಿ 9500 ಡಾಲರ್ ವೆಚ್ಚವಾದರೆ, ಅದೇ ಶಸ್ತ್ರಚಿಕಿತ್ಸೆ ಅಮೆರಿಕದಲ್ಲಿ 1ಲಕ್ಷ ಡಾಲರ್‌ಗೂ ಹೆಚ್ಚು ಖರ್ಚು ಬರುತ್ತದೆ. ಬ್ರಿಟನ್, ಕೋಸ್ಟರಿಕ, ಸಿಂಗಾಪುರ ಮುಂತಾದ ಮೆಡಿಕಲ್ ಟೂರಿಸಂಗೆ ಹೆಸರಾದ ದೇಶಗಳಿಗೆ ಹೋಲಿಸಿದರೆ, ಭಾರತದ ಕಡಿಮೆ ವೈದ್ಯಕೀಯ ವೆಚ್ಚವೇ ಇಲ್ಲಿ ಮೆಡಿಕಲ್ ಟೂರಿಸಂ ಜನಪ್ರಿಯಗೊಳ್ಳಲು ಪ್ರಮುಖ ಕಾರಣವಾಗಿದೆ. 2009ರಲ್ಲಿ ಭಾರತದ ಮೆಡಿಕಲ್ ಟೂರಿಸಂ ಕ್ಷೇತ್ರ 3 ಲಕ್ಷ ವಿದೇಶೀಯರನ್ನು ಆಕರ್ಷಿಸಿದ್ದರೆ, 2011ರಲ್ಲಿ 8.5 ಲಕ್ಷ ವಿದೇಶೀಯರು ಚಿಕಿತ್ಸೆಗಾಗಿ ಆಗಮಿಸಿದ್ದರು. 2015ರ ಕೊನೆಗೆ ಈ ಸಂಖ್ಯೆ 32 ಲಕ್ಷವನ್ನು ದಾಟುವ ನಿರೀಕ್ಷೆ ಇದೆ. ಅಮೆರಿಕ ಮತ್ತು ಯೂರೋಪಿನ ದೇಶಗಳಿಂದ ಮಾತ್ರವಲ್ಲ, ಅಫ್ಘಾನಿಸ್ತಾನ, ಭೂತಾನ್, ನೇಪಾಳ, ಆಸ್ಟ್ರೇಲಿಯ, ಹಾಂಕಾಂಗ್, ಮಾಲ್ಡೀವ್ಸ್, ಮಾರಿಷಸ್, ಬಾಂಗ್ಲಾದೇಶ, ಟರ್ಕಿ, ಪಾಕಿಸ್ತಾನ ಮತ್ತು ಕೊಲ್ಲಿ ದೇಶಗಳಿಂದಲೂ ದೊಡ್ಡ ಸಂಖ್ಯೆಯಲ್ಲಿ ಜನರು ವೈದ್ಯಕೀಯ ಚಿಕಿತ್ಸೆಗಾಗಿ ಭಾರತಕ್ಕೆ ಆಗಮಿಸುತ್ತಿದ್ದಾರೆ.

ಆದರೆ ಇತ್ತೀಚೆಗೆ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ನಡೆಸಿದ ಸಮೀಕ್ಷೆಯೊಂದು ಮೆಡಿಕಲ್ ಟೂರಿಸಂ ನಲ್ಲಿ ನಾವು ಹಿನ್ನಡೆ ಅನುಭವಿಸಲು ಕಾರಣವಾಗುತ್ತಿರುವ ಅಂಶಗಳ ಬಗ್ಗೆ ಗಮನ ಸೆಳೆದಿದೆ. ಮುಖ್ಯವಾಗಿ ವಿದೇಶೀಯರ ಜತೆಗೆ ಸೌಜನ್ಯರಹಿತ ವರ್ತನೆ ಮತ್ತು ಕಿರುಕುಳ ನೀಡುವುದು ನಮ್ಮಲ್ಲಿ ವ್ಯಾಪಕವಾಗಿ ಕಂಡುಬರುತ್ತಿರುವ ಪಿಡುಗು. ಇದರ ಜತೆಗೆ ಮೂಲಸೌಲಭ್ಯಗಳ ಕೊರತೆಯೂ ವಿದೇಶೀಯರಲ್ಲಿ ನಿರುತ್ಸಾಹ ಉಂಟು ಮಾಡುತ್ತಿದೆ ಎಂದು ಸಮೀಕ್ಷೆ ಬೊಟ್ಟುಮಾಡಿದೆ. ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದರಲ್ಲಿ ಮತ್ತು ನಾಗರಿಕ ಪ್ರಜ್ಞೆಯನ್ನು ಪ್ರದರ್ಶಿಸುವುದರಲ್ಲಿ ನಾವು ಯೂರೋಪಿಯನ್ ದೇಶಗಳಿಗಿಂತ ತುಂಬಾ ಹಿಂದೆ ಇದ್ದೇವೆ ಎನ್ನುವುದು ಸರ್ವವಿದಿತ. ಇದರ ಜತೆಗೆ, ಕಾನೂನು ಪಾಲನೆ ಮತ್ತು ನ್ಯಾಯಪ್ರಜ್ಞೆಯನ್ನು ನಾವು ಸರಿಯಾಗಿ ರೂಢಿಸಿಕೊಳ್ಳದಿದ್ದರೆ, ಮೆಡಿಕಲ್ ಟೂರಿಸಂ ಮಾತ್ರವಲ್ಲ, ಒಟ್ಟಾರೆ ಪ್ರವಾಸೋದ್ಯಮದಲ್ಲೂ ದೊಡ್ಡ ಹೊಡೆತ ತಿನ್ನುವುದು ಖಚಿತ.

ಪ್ರವಾಸೋದ್ಯಮ ಎನ್ನುವುದು ಇವತ್ತು ದೇಶಕ್ಕೆ ಅತಿದೊಡ್ಡ ವಿದೇಶೀ ವಿನಿಮಯವನ್ನು ತಂದುಕೊಡುವ ಕ್ಷೇತ್ರವಾಗಿದೆ. ಭಾರತ ಅತ್ಯಂತ ದೊಡ್ಡ ದೇಶವೂ ಆಗಿದ್ದು, ಇಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಪ್ರವಾಸಿಗರು ನೋಡಲೇಬೇಕಾದ ವೈವಿಧ್ಯಮಯ ತಾಣಗಳಿವೆ. ಪ್ರತಿಯೊಂದು ರಾಜ್ಯದ ಪ್ರಾಕೃತಿಕ ಸೌಂದರ್ಯವೂ ಭಿನ್ನವಾಗಿದ್ದು, ನಮ್ಮಲ್ಲಿ ಇರುವಷ್ಟು ವಿಶ್ವಖ್ಯಾತಿಯ ಐತಿಹಾಸಿಕ ಕಟ್ಟಡಗಳು ಬೇರೆಲ್ಲೂ ಕಾಣಸಿಗದು. ಅದಕ್ಕೆಂದೇ ವಿದೇಶೀಯರು ದೊಡ್ಡ ಸಂಖ್ಯೆಯಲ್ಲಿ ಭಾರತಕ್ಕೆ ತಿರುಗಾಟಕ್ಕೆ ಬರುತ್ತಾರೆ. ಇಲ್ಲಿನ ಕಡಿಮೆ ಜೀವನವೆಚ್ಚ ಮತ್ತು ಅತ್ಯಧಿಕ ಸಂಖ್ಯೆಯ ಪ್ರವಾಸಿ ಸ್ಥಳಗಳು ಅವರಿಗೆ ಬಹುದೊಡ್ಡ ಆಕರ್ಷಣೆ. ಜಾಗತೀಕರಣದ ಬಳಿಕ ಇಡೀ ಜಗತ್ತೇ ಒಂದು ಸಣ್ಣ ಹಳ್ಳಿಯಂತಾಗಿರುವಾಗ, ನಾವು ಮೂಢಮತಿಗಳಂತೆ ವರ್ತಿಸುವುದು ಎಳ್ಳಷ್ಟೂ ಸರಿಯಿಲ್ಲ. ಸಜ್ಜನಿಕೆ, ಅತಿಥಿ ಸತ್ಕಾರ, ಪರೋಪಕಾರ, ಸಕಲಜೀವಿಗಳಿಗೆ ಲೇಸನ್ನೇ ಬಯಸುವ ನಮ್ಮ ಪರಂಪರಾಗತ ಗುಣಗಳ ಬಗ್ಗೆ ನಾವು ಸಾಕಷ್ಟು ಭಾಷಣಗಳನ್ನು ಮಾಡುತ್ತೇವೆ. ಆದರೆ ಅದನ್ನು ಕಾರ್ಯರೂಪದಲ್ಲಿ ತರುವುದು ಕಡಿಮೆ. ಈ ನಿಟ್ಟಿನಲ್ಲಿ ಒಟ್ಟು ಭಾರತೀಯ ಸಮಾಜವೇ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕಿದೆ.

■ ಬಿ.ಎಂ.ಹನೀಫ್

